**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 474(310) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮನಕನೂರ |
| ಉತ್ತರಿಸುವ ದಿನಾಂಕ | : | 19.07.2024 |
| ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಿ/ಕಬ್ಬಲಿಗ/ಬೆಸ್ತರನ್ನು ಎಸ್.ಟಿ ಗೆ ಸೇರಿಸುವ ಕುರಿತ ಪ್ರಸ್ತಾವನೆಯು ಎಷ್ಟು ಬಾರಿ ರಾಜ್ಯದಿಂದ ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗಿದೆ; (ಶಿಫಾರಸ್ಸು ಮಾಡಿದ ದಿನಾಂಕ ಮತ್ತು ಶಿಫಾರಸ್ಸಿನ ವಿವರ ಒದಗಿಸುವುದು) | ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಪರ್ಯಾಯ ಪದಗಳನ್ನು (ಕೋಲಿ, ಕಬ್ಬಲಿಗ, ಬೆಸ್ತ ಒಳಗೊಂಡಂತೆ) ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿ ರಾಜ್ಯಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ನವದೆಹಲಿ ಇವರಿಗೆ ಸರ್ಕಾರದ ಪತ್ರ ಸಂಖ್ಯೆ: ಎಸ್ ಡಬ್ಲೂಡಿ 200 ಎಸ್ಎಡಿ 2011, ದಿನಾಂಕ:03/03/2014 ರಲ್ಲಿ ಪ್ರಸ್ತಾವನೆ ಕಳುಹಿಸಲಾಗಿತ್ತು.<br>ಆದರೆ ರಿಜಿಸ್ಟ್ರಾರ್ ಜನರಲ್ ಅಂಡ್ ಸೆನ್ಸನ್ ಕಮೀಷನರ್, ಭಾರತ ಸರ್ಕಾರದ ಗೃಹ ಮಂತ್ರಾಲಯ |
| ಆ) | ಸದರಿ ಪ್ರಸ್ತಾವನೆಯು ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಪುನ: ವಾಪಸ್ಸು ಬಂದಿದ್ದು ಕೇಂದ್ರ ಕೋರಿರುವ ಮಾಹಿತಿಯ ವಿವರಗಳೇನು; | ಇವರು ಕರ್ನಾಟಕ ಸರ್ಕಾರದ ಪ್ರಸ್ತಾವನೆಗೆ ಬೆಂಬಲಿಸಿರುವುದಿಲ್ಲವೆಂದು ಭಾರತ ಸರ್ಕಾರದ ಬುಡಕಟ್ಟು ಮಂತ್ರಾಲಯದಿಂದ ದಿನಾಂಕ: 22.08.2016 ರಂದು ಕರ್ನಾಟಕ ಸರ್ಕಾರಕ್ಕೆ ತಿಳಿಸಿದ್ದ ಹಿನ್ನಲೆಯಲ್ಲಿ . ಹೆಚ್ಚಿನ ಸಮರ್ಥನೆಗಳನ್ನು ನೀಡಿ, ದಿನಾಂಕ:08.02.2017ರಂದು ಭಾರತ ಸರ್ಕಾರಕ್ಕೆ ಪತ್ರ ಬರೆದು ಮರು ಪರಿಗಣಿಸುವಂತೆ ಕೋರಲಾಗಿತ್ತು.<br>ಆದರೆ ಎರಡನೇ ಬಾರಿಯೂ ಸಹ ಗಂಗಾಮತ ಮತ್ತು ಅದರ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತಾರೆ ಈ ಕುರಿತು ವಿವರವಾದ ಸಮರ್ಥನೆಗಳೊಂದಿಗೆ ದಿನಾಂಕ:16.02.2018 ರಂದು ಭಾರತ ಸರ್ಕಾರದ ಬುಡಕಟ್ಟು ಮಂತ್ರಾಲಯಕ್ಕೆ ಮತ್ತೊಮ್ಮೆ ಪತ್ರ ಬರೆದು ರಾಜ್ಯ ಸರ್ಕಾರದ ಶಿಫಾರಸ್ಸನ್ನು ಅನುಮೋದಿಸಲು ಕೋರಲಾಗಿತ್ತು.<br>ಮುಂದುವರೆದು, ಅಖಿಲ ಕರ್ನಾಟಕ ಅಂಬಿಗರ ಚೌಡಯ್ಯ ಮಹಾಸಭಾ ಇವರ ಮನವಿ ಮೇಲೆ ಹೆಚ್ಚುವರಿ ಸಮರ್ಥನೆ ಮತ್ತು ಸಾಕ್ಷ್ಯಾಧಾರಗಳನ್ನು ಒದಗಿಸಲು ಭಾರತ ಸರ್ಕಾರವು ದಿನಾಂಕ:05.10.2018 ರಂದು ತಿಳಿಸಿದ್ದು, ಅದರಂತೆ ಪ್ರಕರಣದಲ್ಲಿ ಹೆಚ್ಚುವರಿಯಾಗಿ ಸಮರ್ಥನೆ ಮತ್ತು ದಾಖಲೆಗಳನ್ನು ದಿನಾಂಕ:12.07.2019 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು ನಂತರ ಈ ಸಂಬಂಧ ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, |

| | | |
|---|---|---|
| | | ಮೈಸೂರು ಇವರಿಂದ ಹೆಚ್ಚುವರಿ/ಪರಿಷ್ಕೃತ ಮಾಹಿತಿ/ದಾಖಲೆಗಳನ್ನು ಪಡೆದು ದಿನಾಂಕ: 02-02-2021ರ ಪತ್ರದಲ್ಲಿ ಮತ್ತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.<br><br>ಭಾರತ ಸರ್ಕಾರದ ಪರಿಶಿಷ್ಟ ಪಂಗಡಗಳ ಮಂತ್ರಾಲಯ ಇವರು ರಾಜ್ಯ ಸರ್ಕಾರಕ್ಕೆ ಬರೆದ ದಿನಾಂಕ: 30-11-2023ರ ಪತ್ರದಲ್ಲಿ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ORGI) ರವರ ದಿನಾಂಕ 30.10.2023 ರ ಪತ್ರದಲ್ಲಿ ಸದರಿ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯನ್ನು ಮತ್ತೊಮ್ಮೆ ತಿರಸ್ಕರಿಸಿರುತ್ತಾರೆ. ಸದರಿ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ಸೂಕ್ತ ಸಮಜಾಯಿಷಿಗಳೊಂದಿಗೆ ಹಲವಾರು ಬಾರಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದ್ದರೂ ಕೇಂದ್ರ ಸರ್ಕಾರದ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ORGI) ರವರು ಪ್ರಸ್ತಾವನೆಯನ್ನು ಬೆಂಬಲಿಸಿರುವುದಿಲ್ಲ.<br><br>ಅನುಬಂಧದಲ್ಲಿ ನೀಡಿದೆ. |
| ಇ) | ಈ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಶೀಘ್ರವಾಗಿ ಕೇಂದ್ರಕ್ಕೆ ಕಳುಹಿಸಿ ಈ ಸಮಾಜದ ಬಹು ದಿನದ ಈ ಬೇಡಿಕೆಯನ್ನು ಈಡೇರಿಸಲು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳುವುದೇ?; | ಪ್ರಸ್ತಾಪಿತ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸೂಕ್ತ ಸಮರ್ಥನೆಗಳೊಂದಿಗೆ ಹಲವಾರು ಬಾರಿ ಪ್ರಸ್ತಾವನೆಯನ್ನು ಕಳುಹಿಸಿದ್ದರೂ ಕೇಂದ್ರ ಸರ್ಕಾರದ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಒಪ್ಪಿರುವುದಿಲ್ಲ.<br><br>ಮುಂದುವರೆದು, ಭಾರತದ ಸಂವಿಧಾನದ ಅನುಚ್ಛೇದ-342(2)ರ ಪ್ರಕಾರ ಯಾವುದೇ ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಭಾರತದ ಸಂಸತ್ತಿಗೆ ಮಾತ್ರ ಅಧಿಕಾರವಿರುತ್ತದೆ. ರಾಜ್ಯ ಸರ್ಕಾರಕ್ಕೆ ಸೇರಿಸುವ ಅಧಿಕಾರವಿರುವುದಿಲ್ಲ. |

ಸಂಖ್ಯೆ: STW/SECB/SAD/115/2024

(**ಸಿದ್ದರಾಮಯ್ಯ**)
ಮಾನ್ಯ ಮುಖ್ಯಮಂತ್ರಿಗಳು

Annexure

**Comments of the ORGI on the proposal for inclusion of "Gangamatha" and its synonyms in the list of Scheduled Tribes of Karnataka**

In response to the ORGI comments of 2020 [sent vide letter no. 8/1/2014-SS (Karnataka) dated 13.10.2020], the State Govt. now has sent some additional information, mainly in the form of various Census reports/publications, requesting to revisit the ORGI comments as mentioned.

2. The Proposal for inclusion of "Gangamatha" and its synonyms in the list of Scheduled Tribes of Karnataka has been examined multiple times since 1992. After 2002 Modalities, the above-stated proposal has been examined five times (in 2002, 2003, 2016, 2017, and 2020). The ORGI did not support the proposal on the grounds that there is no ethnographic information available on "Gangamatha" in published literature as well as in earlier Census Reports. The only exception is that in 1931 Census report "Gangamatha" is mentioned to be a Sanskritized name adopted by the Besthas, a group of fishermen communities. In 1901 Census, Besta along with its 42 sub-castes have been reported under the occupational category of fisherman, boatman, etc. The "Gangamatha" found to be a populous heterogeneous group of communities having several endogamous functional or occupational groups. The proposed community along with their synonyms found equivalent to caste Hindus. They do not possess any tribal characteristics.

3. The State Govt. now only furnished various Census Reports as additional information and these various Census Reports only justify that the proposed community "Gangamatha" is a collective name for different Castes and communities of diverse origin. According to Census 1881 the Bestar, Kbber, Kabbalger, Koli, Chunwalia, Madder, etc. are cultivators, while the Bhoi, Gabit, Harikantra, Koli Konkani, Macchi, Moger, etc. are fishermen communities. In 1891 Census, Besta have been classified as Hindu fisherman and boatman group. In 1901 Census, Koli have been classified as 'Sudras' under the Scytho-Dravidian group. Thus, "Gangamatha" is not a singular community name, but a collective name for several communities of diverse ethnic origin and occupations.

4. At present, the different communities who are collectively called "Gangamatha" are separately notified as OBCs in Karnataka as well as in neighboring States. In Karnataka, the various communities of Gangamatha are notified as OBCs separately at sl.no. 6; 8; 86; 87; and 120. Some of them are also notified as SCs and STs in Karnataka and in other States (e.g., Moger is SC in Karnataka, Kerala, Tamil Nadu; Bhoi is SC in Odisha; Koli is SC in Gujarat, Chhattisgarh, Haryana, etc.). Thus, the different statutory status (i.e., OBC/SC/ST status) of the different constituting groups/communities of Gangamatha only justify that they are not one single community.

5. In view thereof the ORGI is <u>unable to support</u> the current proposal.

*****

30.10.2023